ಆ) ಕಳೆದ ವರ್ಷ ಕಂದಾಯ ಇಲಾಖೆ ಆಡಳಿತ ಸೇವೆಗೆ ಸೇರದ ಯಾವ ಯಾವ ಇಲಾಖೆಗಳ ಅಧಿಕಾರಿಗಳು ಭಾರತೀಯ ಆಡಳಿತ ಸೇವೆಗೆ ಸೇರಲು ಅರ್ಹತೆ ಪಡೆದಿದ್ದಾರೆ ಮತ್ತು ಆ ಅಧಿಕಾರಿಗಳಾರು; ಅವರಲ್ಲಿ ಯಾವ ಯಾವ ಇಲಾಖೆಗಳ ಅಧಿಕಾರಿಗಳನ್ನು ಅಂತಿಮವಾಗಿ ಆಯ್ಕೆ ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಶಿಫಾರಸ್ಸು ಮಾಡಲಾಗಿದೆ.

ಇ) ಅಂತಿಮವಾಗಿ ಆಯ್ಕೆ ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿರುವ ಪಟ್ಟಿಯಲ್ಲಿ ಒಬ್ಬ ವ್ಯಕ್ತಿಯೂ ಕೂಡ ಹಿಂದುಳಿದ ಜಾತಿಗಳಿಗೆ ಸೇರಿದವರನ್ನು ಎನ್ನುವುದು ನಿಜವೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಿ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲಾಗುವುದೆ; (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಆಯ್ಕೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿರುವುದಿಲ್ಲ.

ಆ) ಆಯ್ಕೆ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ಈ ಹಂತದಲ್ಲಿ ಮಾಹಿತಿಯನ್ನು ನೀಡಲು ಸಾಧ್ಯವಾಗುವುದಿಲ್ಲ.

ಇ) ಆಯ್ಕೆ ಪಟ್ಟಿಯು ಇನ್ನೂ ಕೇಂದ್ರ ಸರ್ಕಾರದಿಂದ ಅನುಮೋದಿಸಲ್ಪಟ್ಟಿಲ್ಲವಾದ್ದರಿಂದ ಈಗ ವಿವರ ನೀಡಲು ಸಾಧ್ಯವಾಗುವುದಿಲ್ಲ.

ಕರ್ನಾಟಕ ಲೋಕಸೇವಾ ಆಯೋಗ ಸದಸ್ಯರ ನೇಮಕಾತಿ ಮತ್ತು ಪ್ರಾತಿನಿಧ್ಯ

15 (301) : ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಲೋಕಸೇವಾ ಆಯೋಗದ ಹಾಲಿ ಅಧ್ಯಕ್ಷರು ಮತ್ತು ಸದಸ್ಯರಾರು; ಇವರು ಯಾವ ಯಾವ ಜಿಲ್ಲೆಗಳಿಗೆ ಸೇರಿದವರು;

ಆ) ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಮತ್ತು ಸದಸ್ಯರಾಗಿ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸಿದವರಾರು; ಅವರ ಸೇವಾವಧಿ ಮತ್ತು ಸ್ವ ಜಿಲ್ಲೆ, ಮಾಹಿತಿ ನೀಡುವುದು;

ಇ) ಈ ಆಯೋಗದ ಅಧ್ಯಕ್ಷರಾಗಿ ಮತ್ತು ಸದಸ್ಯರಾಗಿ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಪ್ರತಿನಿಧಿಸಿದವರಾರು; ಅವರ ಸೇವಾವಧಿ ಎಷ್ಟು;

ಈ) ಖಾಲಿಯಾಗಿರುವ ಸದಸ್ಯರ ನೇಮಕಾತಿ ಮಾಡುವಾಗ ರಾಯಚೂರು ಜಿಲ್ಲೆಗೆ ಅವಕಾಶ ದೊರಕಿಸಿ ಕೊಡಲಾಗುವುದೆ; (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು)

ಅ)	ಹೆಸರು	ಪದನಾಮ	ಜಿಲ್ಲೆ
1)	ಡಾ: ಎಚ್.ಎನ್. ಕೃಷ್ಣ	ಅಧ್ಯಕ್ಷರು	ಹಾಸನ
2)	ಡಾ: ಮೊಹಮದ್ ಅಲಿ ಖಾನ್	ಸದಸ್ಯರು	ಮೈಸೂರು
3)	ಶ್ರೀಮತಿ ಲಿಲ್ಲಿಯನ್ ಜೇವಿಯರ್	ಸದಸ್ಯರು	ಬೆಂಗಳೂರು
4)	ಡಾ: ಹೆಚ್.ಎಸ್. ಪಾಟೀಲ್	ಸದಸ್ಯರು	ಹಾವೇರಿ
5)	ಶ್ರೀ ವೆಂಕಟಸ್ವಾಮಿ	ಸದಸ್ಯರು	ಕೋಲಾರ
6)	ಶ್ರೀ ದಾಸಯ್ಯ	ಸದಸ್ಯರು	ಬೆಂಗಳೂರು ಗ್ರಾಮಾಂತರ

ಆ)	ಹೆಸರು	ಪದನಾಮ	ಸೇವಾವಧಿ	ಜಿಲ್ಲೆ
1)	ಡಾ: ಎಚ್.ಎನ್. ಕೃಷ್ಣ	ಅಧ್ಯಕ್ಷರು	15.1.2001 ರಿಂದ ಇಲ್ಲಿಯವರೆಗೆ	ಹಾಸನ
2)	ಶ್ರೀ ಕೆ. ಮುಕುಡಪ್ಪ	ಸದಸ್ಯರು	19.3.1998 ರಿಂದ 3.3.2004	ಬಳ್ಳಾರಿ
3)	ಶ್ರೀ ಆರ್. ನಾಗರಾಜು	ಸದಸ್ಯರು	9.12.1998 ರಿಂದ 18.7.2002	ದಾವಣಗೆರೆ
4)	ಡಾ: ಮೊಹಮದ್ ಅಲಿ ಖಾನ್	ಸದಸ್ಯರು	4.10.1999 ರಿಂದ ಇಲ್ಲಿಯವರೆಗೆ	ಮೈಸೂರು
5)	ಶ್ರೀಮತಿ ಲಿಲ್ಲಿಯನ್ ಜೇವಿಯರ್	ಸದಸ್ಯರು	24.2.2000 ರಿಂದ ಇಲ್ಲಿಯವರೆಗೆ	ಬೆಂಗಳೂರು
6)	ಶ್ರೀ ಡಿ.ಎನ್. ಮುನಿಕೃಷ್ಣ	ಸದಸ್ಯರು	4.8.2000 ರಿಂದ 9.6.2002	ಬೆಂಗಳೂರು
7)	ಡಾ: ಹೆಚ್.ಎಸ್. ಪಾಟೀಲ್	ಸದಸ್ಯರು	19.3.2001 ರಿಂದ ಇಲ್ಲಿಯವರೆಗೆ	ಹಾವೇರಿ
8)	ಶ್ರೀ ವೆಂಕಟಸ್ವಾಮಿ	ಸದಸ್ಯರು	9.6.2003 ರಿಂದ ಇಲ್ಲಿಯವರೆಗೆ	ಕೋಲಾರ
9)	ಶ್ರೀ ದಾಸಯ್ಯ	ಸದಸ್ಯರು	11.12.2003 ರಿಂದ ಇಲ್ಲಿಯವರೆಗೆ	ಬೆಂಗಳೂರು ಗ್ರಾಮಾಂತರ

ಇ)	ಜಿಲ್ಲೆ	ಪ್ರತಿನಿಧಿಸಿದವರು	ಪದನಾಮ	ಅವಧಿ
1)	ಬೀದರ್	ಆರ್.ವಿ. ಬಿಡಪ್	ಸದಸ್ಯರು	20.3.1967 ರಿಂದ 14.2.1969 ರವರೆಗೆ
			ಅಧ್ಯಕ್ಷರು	15.2.1969 ರಿಂದ 14.2.1975 ರವರೆಗೆ
2)	ಗುಲ್ಬರ್ಗಾ	ಕೆ.ಎಂ.ಕೋಟಿ	ಸದಸ್ಯರು	1.8.1985 ರಿಂದ 11.1.1989ರವರೆಗೆ
		ಬಿ.ಬಿ. ಪಾಟೀಲ್ ಓಕಳಿ	ಸದಸ್ಯರು	25.3.1991 ರಿಂದ 24.3.1997 ರವರೆಗೆ
3)	ರಾಯಚೂರು	ಪಂಪನಗೌಡ	ಸದಸ್ಯರು	4.3.1957 ರಿಂದ 3.3.1963 ರವರೆಗೆ
4)	ಕೊಪ್ಪಳ	ಎಚ್.ಸಿ. ನೀರಾವರಿ	ಸದಸ್ಯರು	28.7.1994 ರಿಂದ 27.7.2000 ರವರೆಗೆ
5)	ಬಳ್ಳಾರಿ	ಕೆ. ಮುಕುಡಪ್ಪ	ಸದಸ್ಯರು	19.3.1998 ರಿಂದ 3.3.2004 ರವರೆಗೆ

ಈ) ಭಾರತ ಸಂವಿಧಾನದ 316ನೇ ಅನುಚ್ಛೇದದನ್ವಯ ಸದಸ್ಯರ ನೇಮಕಾತಿ ಮಾಡಲಾಗುತ್ತದೆ. ಈ ಅನುಚ್ಛೇದದಲ್ಲಿ ರಾಜ್ಯದ ಯಾವುದೇ ನಿರ್ದಿಷ್ಟ ಭೌಗೋಳಿಕ ಪ್ರದೇಶದ ವ್ಯಕ್ತಿಗಳನ್ನು ನೇಮಕ ಮಾಡುವ ಬಗ್ಗೆ ಅಸ್ಪದವಿರುವುದಿಲ್ಲ.

ಕೆ.ಪಿ.ಎಸ್.ಸಿ. ಆಯೋಗದಿಂದ ಎ ಮತ್ತು ಬಿ ಗುಂಪಿನ ಹುದ್ದೆಗಳ ಆಯ್ಕೆಯ ಬಗ್ಗೆ

16 (302)*: ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಕರ್ನಾಟಕ ಲೋಕಸೇವಾ ಆಯೋಗ ಯಾವ ಯಾವ ಇಲಾಖೆಗಳ ಎ ಮತ್ತು ಬಿ ಗುಂಪಿನ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿ ಇನ್ನೂ ಪ್ರಕಟಿಸಬೇಕಿದೆ. ಹಾಗೂ

ಪ್ರಕಟಿಸದೆ ಇರುವುದಕ್ಕೆ ಕಾರಣಗಳೇನು; ಆಯ್ಕೆ ಇತ್ಯರ್ಥ ಸಮಸ್ಯೆ ಇನ್ನೂ ಎಷ್ಟು ದಿನಗಳಲ್ಲಿ ಬಗೆಹರಿಸಲಾಗುವುದು; (ವಿವರ ನೀಡುವುದು);

ಆ) ಕಳೆದ 3 ವರ್ಷಗಳಲ್ಲಿ ಯಾವ ಯಾವ ಇಲಾಖೆಗಳ ಆಯ್ಕೆ ಪಟ್ಟಿಯನ್ನು ಹುದ್ದೆವಾರು ಸರ್ಕಾರಕ್ಕೆ ಸಲ್ಲಿಸಿದೆ; ಈ ಹುದ್ದೆಗಳಿಗೆ ಆಯ್ಕೆಯಾದವರ ಜಾತಿ ಮತ್ತು ಅವರು ಆಯ್ಕೆಗಾಗಿ ನೀಡಿರುವ ವರ್ಗ ಯಾವುದು;

ಇ) ಅರ್ಹತೆ ಮತ್ತು ಪ್ರತಿಭೆ ಇದ್ದಾಗ್ಯೂ ಕೂಡ ಉತ್ತರ ಕರ್ನಾಟಕದ ಜಿಲ್ಲೆಗಳ ಅಭ್ಯರ್ಥಿಗಳು ಈ ಹುದ್ದೆಗಳ ಅವಕಾಶದಿಂದ ವಂಚಿತರಾಗುತ್ತಿರುವುದು ನಿಜವಲ್ಲವೇ; ಇದರ ನಿವಾರಣೆಗಾಗಿ ಸರ್ಕಾರದ ಕ್ರಮವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಕೆಳಕಂಡ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಬೇಕಾಗಿದೆ:

1) 1998 ಹಾಗೂ 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರುಗಳ ಹುದ್ದೆಗಳಿಗೆ,
2) ಔಷಧ ನಿಯಂತ್ರಣ ಇಲಾಖೆಯ ಔಷಧ ಪರಿವೀಕ್ಷಕರು,
3) ವಾರ್ತಾ ಇಲಾಖೆಯ ಸಹ ನಿರ್ದೇಶಕರು,
4) ಮೀನುಗಾರಿಕೆ ಇಲಾಖೆಯ ಸಹ ನಿರ್ದೇಶಕರು,
5) ನಗರ ಯೋಜನಾ ಇಲಾಖೆಯ ಕಿರಿಯ ನಗರ ಯೋಜಕರು

1998ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು ಅದರ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ. 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿತ್ವ ಪರೀಕ್ಷೆ ನಡೆಸಬೇಕಾಗಿರುತ್ತದೆ. ಇನ್ನಿತರ ಹುದ್ದೆಗಳ ಬಗ್ಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಹಾಗೆಯೇ, ಈ ಹುದ್ದೆಗಳಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳ ಮೀಸಲಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.

ಆಯ್ಕೆಯಾದವರ ಜಾತಿ/ವರ್ಗದ ವಿವರಗಳು ಹೀಗಿವೆ: ಪರಿಶಿಷ್ಟ ಜಾತಿ–93, ಪರಿಶಿಷ್ಟ ಪಂಗಡ–60, ಪ್ರವರ್ಗ–1–7, ಪ್ರವರ್ಗ–2ಎ–14, ಪ್ರವರ್ಗ–2ಬಿ–2, ಪ್ರವರ್ಗ–3ಎ–3, ಪ್ರವರ್ಗ–3ಬಿ–4, ಸಾಮಾನ್ಯ ವರ್ಗ–42.